**ಯೆಬಡಿ ಕಾಡಲ್ಲಿ ವಾಸವಾಗಿದ್ದ ಅಲೆಮಾರಿ ಬುಡಕಟ್ಟಿನೊಂದಿಗೆ ಎರಡು ತಿಂಗಳು ಕಳೆಯಲು ಹೋದ ದಿವ್ಯೋತ್ತಮನಿಗೆ ಅಲ್ಲಿ ಕಂಡ ಜಗತ್ತು ಬೇರೆಯದೇ ಆಗಿತ್ತು.**

ಮತ್ತೊಂದು ವಿದಾಯಕ್ಕೆ ತೆರೆದುಕೊಂಡ ಬೆಳಗು ಮುಂದಿನ ಕೆಲಸಕ್ಕೆ ಆತುರ ಮಾಡಿಸಿ ತಿಂಡಿಯ ಟೇಬಲ್ಲಿಗೆ ತಂದಿತ್ತು. 'ನಿನಗೆ ಏನೇನು ಇಷ್ಟವೊ ಅದನ್ನೆಲ್ಲ ತರಿಸಿಕೊಂಡು ತಿಂದ್ಬಿಡು. ಮತ್ತೆ ಎರಡು ತಿಂಗಳು... ಗೊತ್ತಲ್ಲ?' ಕಿರುನಗುವಿನಲ್ಲಿ ಅಂದ ಗಾಂಗೇಯ. ಆಗಲೆ ಉದ್ದಿನವಡೆ ಗೋದಿಶಿರಾ ಒಂದೊಂದು ಪ್ಲೇಟು ಮುಗಿಸಿದ್ದ ದಿವ್ಯೋತ್ತಮನಿಗೆ ಮತ್ತೇನು ಬೇಕೆನಿಸಲಿಲ್ಲ. ನಿನ್ನೆ ಬೆಳಗ್ಗೆಯೆದ್ದಾಗಲು ರೂಮಿನಲ್ಲಿ ಇಂತಹದೇ ಮಾತು. 'ಸಿನಿಮಾ, ತಿಂಡಿ, ಅಲೆದಾಟ, ಅದೇನೇನು ಮಾಡಬೇಕೆನಿಸುತ್ತದೋ ಮಾಡಿಕೋ, ಮತ್ತೆ ಅದೇನಾದ್ರು ರೂಢಿಯಿದ್ರೆ ಅದ್ನೂ... ಮನಸು ಸದ್ಯದಲ್ಲಿ ಅಂತಹದನ್ನು ಬೇಡಿರಬಾರದು' ಅಂದಿದ್ದ ಕೈಯಲ್ಲಿ ಬಾಟಲಿಯ ಸಂಜ್ಞೆ ತೋರಿಸುತ್ತ. ಕಾಫಿಯ ಗುಟುಕೊಂದನ್ನು ಗಂಟಲಲ್ಲಿ ಯಾಂತ್ರಿಕವಾಗಿ ಇಳಿಸಿದವನಿಗೆ ತಾನೀಗ ಅನುಭವಿಸುತ್ತಿರೋದು ಅನೂಹ್ಯದ ಬಗೆಗಿನ ರೋಮಾಂಚನವಾ ಅಥವ ಎಲ್ಲ ಅಯೋಮಯವ ಅನ್ನುವ ಅನುಮಾನವಾಯಿತು. ಬ್ರಿಗೇಡ್ ರಸ್ತೆಯ ಸ್ಕಾಯ್ ಟಚ್ ಟವರ್‌ನ ಹನ್ನೆರಡನೆ ಅಂತಸ್ತಿನ ಕಿಟಕಿಯಿಂದ ಹಸಿರು ಚಪ್ಪರ ಹಾಕಿದಂತಹ ಶಹರ ಬೇರೆಯೆ ಪೋಸು ಕೊಡುತ್ತಿರುವುದನ್ನು ನೋಡುತ್ತ ಸುಭಾಷ ರೆಡ್ಡಿಯ ಮಾತನ್ನು ಆಲಿಸಿದ್ದ. ಆಫೀಸಿನ ಗಾಜಿನ ಗೋಡೆಗಳ ಮೇಲೆ ನ್ಯಾಶನಲ್ ಜಿಯೋಗ್ರಾಫಿಕ್, ಡಿಸ್ಕವರಿ ಚಾನೆಲ್‌ಗಳ ಅಪರೂಪದ ಅನೇಕ ಚಿತ್ರಗಳನ್ನು ಪ್ರದರ್ಶಿಸಿದ್ದರು. ಅಪರೂಪದ ಸಾಹಸಿ; ಅಷ್ಟೇ ಮೇಧಾವಿ. ಹಲವು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನ ಪಡೆದುಕೊಂಡಿದೆ ರೆಡ್ಡಿಯ ಸಂಸ್ಥೆ. ಕ್ಯೂಬಿಕ್‌ಗಳಲ್ಲಿ ಎದುರಿನ ಕಂಪ್ಯೂಟರಲ್ಲಿ ತಲ್ಲೀನತೆಯಿಂದ ಹುಡುಕುತ್ತ, ಫೋನಲ್ಲಿ ಸಂಭಾಷಿಸುತ್ತ, ಪ್ರಿಂಟ್ ತೆಗೆಯುತ್ತ ರೆಡ್ಡಿಯ ಕ್ಯಾಬಿನ್ನಿಗೆ ಪಾದರಸದಂತೆ ಚಲಿಸುವ ಎಳೆಯ ಹುಡುಗಿಯರು. ಗೆಸ್ ವಾಟ್ ಅನ್ನುವ ವಿಚಿತ್ರ ಹೆಸರನ್ನೆ ಇಟ್ಟಿದ್ದಾನೆ ಸಂಸ್ಥೆಗೆ. 'ಅಂಕುರಗಟ್ಟುವ ಅನುಭವ ಬರಬೇಕು. ಅದು ಹೇಗೆಂದರೆ ಪಕ್ಕಾ ಅದೇ ಸ್ಥಿತಿಯಲ್ಲಿ. ನಾಕನೆ ಅಂತಸ್ತಿಂದ ಬೀಳುವ ಅನುಭವವೆಂದರೆ ಅಲ್ಲಿಂದ ಒಂದು ಗೊಂಬೆಯನ್ನು ಬೀಳಿಸಿ ನೋಡುವುದಲ್ಲ, ತಾನೇ ಅಲ್ಲಿಂದ ಬಿದ್ದು ಅನುಭವಿಸುವುದು; ಕೆಳಗೆ ಕುಷನ್ ಇಟ್ಟುಕೊಳ್ಳಿ ಬೇಕಿದ್ದರೆ. ಆಗಲೆ ಅದು ಮನಸಿಗೆ ಇಳಿವ ಸತ್ಯಕ್ಕೆ ಹತ್ತಿರದ ಅನುಭವ' ಅಂದಿದ್ದ. 'ಈ ಜೀವನ ಚಕ್ರಕ್ಕೆ ಅನೇಕ ಕೇಂದ್ರಗಳಿವೆ. ನಮಗೆ ಡಿಕ್ಕಿ ಹೊಡೆದುಕೊಂಡು ಹೋಗುವ ಸಂಗತಿಗಳ ಬಗ್ಗೇ ನಮಗೆ ಗೊತ್ತಿರುವುದಿಲ್ಲ. ಎಲ್ಲ ಗೊತ್ತಿರುವ ಹಾಗೆ ಪೊಕಳೆ ಹೊಡೆಯುವವರ ಬಗ್ಗೆ ನನಗೆ ಕನಿಕರ ಬರುತ್ತದೆ. ದೂರ ನಿತ್ತು ನೋಡಿ, ಅದು ಹಾಗೆ ಹೀಗೆ ಅಂತ ಕತೆ ಬೇಡ. ಥೇಟು ಅದೇ ಪರಿಸ್ಥಿತಿಯಲ್ಲಿ, ಅಲ್ಲಿಯೆ, ಹೋರಾಡಿ ಬದುಕಿ ಅನುಭವಿಸಬೇಕು' ರೆಡ್ಡಿಯ ವಿವರಣೆ ಒಳಗಿಳಿದಂತೆ ನಿಧಾನಕ್ಕೆ ಪ್ರಭಾವಿಸತೊಡಗಿತ್ತು. ದೊಡ್ಡ ಹೆಸರಿನ ಸಂಸ್ಥೆಯ ಒಂದು ಪ್ರಾಜೆಕ್ಟಿನಲ್ಲಿ ಭಾಗವಹಿಸುವ ಆಕರ್ಷಣೆ ಕಮ್ಮಿಯದಾಗಿರಲಿಲ್ಲ. ದಿವ್ಯೋತ್ತಮ ಎರಡು ನಿಮಿಷ ಯೋಚಿಸಿ ತಾನು ತಯಾರಿದ್ದೇನೆ ಅಂದ. ರೆಡ್ಡಿ ಪ್ರಾಜೆಕ್ಟ್ ಮ್ಯಾನೇಜರ್ ಗಾಂಗೇಯನಿಗೆ ಸಂಜ್ಞೆ ಮಾಡಿದ. ಆತ ಪ್ರಿಂಟರಿನಿಂದ ತೆಗೆದ ಮೂರು ಶೀಟುಗಳನ್ನು ಕೊಟ್ಟು, 'ಆಳವಾಗಿ ಓದು, ಮತ್ತೆ ಹೇಳು' ಅಂದಿದ್ದ. ಅಗ್ರೀಮೆಂಟು ವಿವರವಾಗಿತ್ತು. ಬಹಳ ನಿಖರವಾಗಿ ಬಿಗಿಯಾದ ಪಟ್ಟುಗಳನ್ನು ಬಳಸಿ ಬರೆದ ಕರಾರು ಅನ್ನುವುದು ಅರ್ಥವಾಯಿತು.